**ದಿನಾಂಕ: 15-07-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ ವಿ.ಸಿ.ಎಂ.ಪಿ. ವಕೀಲರಿಂದ**

1. ಮೃತ ಸೂರ್ಯಕಾಂತ ನನ್ನ ತಂದೆಯಾಗಬೇಕು. 1ನೇ ಅರ್ಜಿದಾರರು ನನ್ನ ತಾಯಿ. 2ನೇ ಅರ್ಜಿದಾರರು ನನ್ನ ಅಕ್ಕಳಾಗಬೇಕು. 4ನೇ ಅರ್ಜಿದಾರರು ನನ್ನ ತಮ್ಮನಾಗಬೇಕು. ನನ್ನ ತಂದೆ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಹೆಸರಿನಲ್ಲಿ ಹೊಲ ಇರುತ್ತದೆ. ಸದರಿ ಹೊಲದ ಬಗ್ಗೆ ಪಹಣಿ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ಹೆಸರಿನಲ್ಲಿ ಹೊಲ ಇದೆ ಎಂದು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಹೊಲದಿಂದ ವರ್ಷಕ್ಕೆ 6 ಲಕ್ಷ ಆದಾಯ ಬರುತ್ತಿತ್ತು. ಹೊಲದಿಂದ ವರ್ಷಕ್ಕೆ 6 ಲಕ್ಷ ಆದಾಯ ಬರುತ್ತಿತ್ತು ಎಂದು ದಾಖಲಾತಿ ಹಾಜರುಪಡಿಸಿಲ್ಲ.

2. ಅಪಘಾತವಾದ ಸಮಯದಲ್ಲಿ ನನ್ನ ತಂದೆಗೆ 45 ವರ್ಷ ವಯಸ್ಸಾಗಿತ್ತು. ನಿಮ್ಮ ತಂದೆಯ ಆಧಾರ್ ಕಾರ್ಡ್ ಇದೆಯಾ ಎಂದರೆ ಇತ್ತು ಅಪಘಾತವಾದ ಸಮಯದಲ್ಲಿ ಕಳೆದುಹೋಗಿದೆ. ನಿಮ್ಮೆಲ್ಲರ ಹೆಸರು ಮತ್ತು ನಿಮ್ಮ ತಂದೆ ಹೆಸರಿನಲ್ಲಿ ಇರುವಂತ ರೇಷನ್ ಕಾರ್ಡ್ ಇದೆಯಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಎಲ್ಲ ದಾಖಲೆಗಳು ಇದ್ದರೂ ಸಹ ಇಲ್ಲ ಎಂದು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಪಘಾತವಾಗುವ ಸಮಯದಲ್ಲಿ ನಿಮ್ಮ ತಂದೆಗೆ 45 ವರ್ಷ ವಯಸ್ಸಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆಗೆ 45 ವರ್ಷ ವಯಸ್ಸಾಗಿತ್ತು ಏನು ದಾಖಲೆ ನೋಡಿ ಹೇಳುತ್ತಿದ್ದೀರಿ ಎಂದರೆ ಅವರ ವಯಸ್ಸು ನನಗೆ ಗೊತ್ತಿತ್ತು ಎಂದು ಉತ್ತರಿಸುತ್ತಾರೆ.

3. ಅಪಘಾತವಾದಾಗ ನಮ್ಮ ತಂದೆ ಗೊಬ್ಬರ ಬೀಜ ತರಲು ಅಫ್ಜಲ್ಪೂರಕ್ಕೆ ಮೋಟಾರ್ ಸೈಕಲ್ ಮೇಲೆ ಹೋಗಿದ್ದರು. ಯಾರು ಯಾರು ಹೋಗಿದ್ದರು ಎಂದರೆ ನನ್ನ

ತಂದೆ ತಂದೆ ಮತ್ತು ಅಲ್ಲಾವುದ್ದೀನ್ ಹೋಗಿದ್ದರು ಎಂದು ಉತ್ತರಿಸುತ್ತಾರೆ. ಆ ದಿನ ಮೋಟಾರಸೈಕಲನ್ನು ನನ್ನ ತಂದೆ ಚಲಾಯಿಸುತ್ತಿದ್ದರು. ನಿಮ್ಮ ತಂದೆಯವರಿಗೆ ವಾಹನ ಚಲಾಯಿಸಲು ಪರವಾನಿಗೆ ಇತ್ತಾ ಎಂದರೆ ಇತ್ತು ಎಂದು ಉತ್ತರಿಸುತ್ತಾರೆ. ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ಸಮಯದಲ್ಲಿ ನಮ್ಮ ತಂದೆ ಮತ್ತು ಅಲ್ಲಾವುದ್ದೀನ್ ಹೆಲ್ಮೇಟ್ ಧರಿಸಿದ್ದರು. ಅಪಘಾತವಾದ ಸಮಯದಲ್ಲಿ ನಮ್ಮ ತಂದೆ ಹೆಲ್ಮೇಟ್ ಧರಿಸಿದ್ದರು ಎಂದು ಯಾವುದೇ ದಾಖಲಾತಿಯಲ್ಲಿ ಬಂದಿಲ್ಲ ಎಂದರೆ ಸರಿಯಲ್ಲ.

4. ಅಪಘಾತವಾದ ನಂತರ ಗಣೇಶ, ಮಹಾಂತೇಶ ನಾಗಾ ಎನ್ನುವವರು ಅಪಘಾತವಾದ ವಿಷಯವನ್ನು ತಿಳಿಸಿದರು. ಅಪಘಾತವು ಯಾವ ರೀತಿ ಆಗಿದೆ ಎಂದು ಹೇಳಿದರು ಎಂದರೆ ನನ್ನ ತಂದೆ ಸೈಡಿಗೆ ಬರುವಾಗ ಎದುರಿನಿಂದ ಟಿಪ್ಪರ್ ಬಂದು ಡಿಕ್ಕಿಪಡಿಸಿರುತ್ತದೆ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ಅಪಘಾತವು ಶಿವಯ್ಯ ಗುತ್ತೇದಾರರವರ ಹೊಲದ ಹತ್ತಿರ ಮಧ್ಯಾಹ್ನ 02-45 ರಿಂದ 03-00 ಗಂಟೆ ಸುಮಾರಿಗೆ ಆಗಿರುತ್ತದೆ. ಸದರಿ ಅಪಘಾತವು ಟಿಪ್ಪರ್ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನಿಮ್ಮ ತಂದೆಯವರು ವಾಹನ ಚಲಾಯಿಸಲು ಯಾವುದೇ ಲೈಸೆನ್ಸ್ ಇರಲಿಲ್ಲ ಮತ್ತು ಅಪಘಾತವು ಅವರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತವು ಟಿಪ್ಪರ್ ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ದಾಖಲಾತಿ ಸೃಷ್ಠಿ ಮಾಡಿದ್ದೀರಿ ಎಂದರೆ ಸರಿಯಲ್ಲ.

5. ನಿಮ್ಮ ತಂದೆಯವರಿಂದಲೇ ಮನೆ ನಡೆಯುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಟಿಪ್ಪರ್ ಲಾರಿಗೆ ಯಾವುದೇ ಪರ್ಮಿಟ್ ಮತ್ತು ರಿಜಿಸ್ಟ್ರೇನ್ ಇರಲಿಲ್ಲ ಆದ್ದರಿಂದ 2ನೇ ಎದುರುದಾರರ ಪರಿಹಾರ ಹಣ ಕೊಡಲು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಪರಿಹಾರ ಹಣವನ್ನು ಯಾವುದೇ ಆಧಾರ ಇಲ್ಲದೇ ಅಂದಾಜಿನ ಮೇಲೆ ಕೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸುಳ್ಳು ದಾಖಲಾತಿ ಸೃಷ್ಠಿ ಮಾಡಿ ಸುಳ್ಳು ಕೇಸು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ